ವರದಿಯಲ್ಲಿ ತಿಳಿಸಿದ್ದರು. ಪೂರ್ತಿಯಾಗಿ ನೋಡದೆ ಹಾಗೆ ವರದಿಯನ್ನು ಕೊಡುವುದು ಅದೆಷ್ಟು ಮೋಸವಾಗುತ್ತದೆ ಅಲ್ವಾ?'

ಮೀರಾ ನಿಧಾನವಾಗಿ ಹಿಂದಿನಿಂದ ಬಂದು ವಿದ್ಯಾರ್ಥಿಗಳ ಗುಂಪಿಗೆ ಸೇರಿ, ಆಸಕ್ತಿಯಿಂದ ಆಲಿಸುತ್ತಿದ್ದ ಮಾನಸಿಯ ಪಕ್ಕಕ್ಕೆ ಸರಿದು ನಿಂತು,

'ಮಾನ್ಸಿ...' ಎಂದು ಕರೆದಳು ಪಿಸುದನಿಯಲ್ಲಿ.

ಗಾಬರಿಯಿಂದ ಅವಳತ್ತ ತಿರುಗಿ ನೋಡಿದ ಮಾನಸಿ, 'ನೀನಾ? ಯಾಕೆ ಇಲ್ಲಿಗೆ ಬಂದೆ?' ಕೇಳಿದಳು.

'ಅಬ್ಬಬ್ಬಾ! ಎಂಥಾ ಕೆಟ್ಟ ವಾಸನೆ? ದಿನಾ ಇಲ್ಲಿ ಹೇಗಿರ್ತೀಯಾ?' ಎಂದ ಮೀರಾ ಕರ್ಚೀಫಿನಿಂದ ಬಾಯಿ ಮೂಗನ್ನು ಒತ್ತಿ ಹಿಡಿದು ಕೊಂಡಳು.

'ಅದಿರಲಿ ಇಲ್ಲಿಗ್ಯಾಕೆ ಬಂದೆ?'

'ಸಾಕ್ಷಿ ಇನ್ನೂ ಹಾಸ್ಟೆಲ್‌ಗೂ ಬಂದಿಲ್ಲ. ಕಾಲೇಜಿಗೂ ಬಂದಿಲ್ಲ. ಶನಿವಾರದಿಂದ ಅವಳ ಪತ್ತೆಯೇ ಇಲ್ಲ...'

'ನಿನ್ನೆ ಭಾನುವಾರ ತಾನೆ? ಅವಳ ಫ್ರೆಂಡ್ ಮನೇಲಿ ಉಳಿದುಕೊಂಡಿರಬಹುದು, ಇವತ್ತು ಬರಬಹುದು.'

'ಇರಬಹುದು.'

'ಅದಿರಲಿ... ನೀನ್ಯಾಕೆ ಇಲ್ಲಿಗೆ ಬಂದೆ? ಪ್ರೊಫೆಸರ್ ಅವರದು ಹದ್ದಿನ ಕಣ್ಣು; ನೋಡಿದರೆ, ಪಿಸುಮಾತು ಕಿವಿಗೆ ಬಿದ್ದರೆ ಇಬ್ಬರನ್ನೂ ಹೊರಗೆ ಹಾಕ್ತಾರೆ...' ಗದರಿಸುವ ದನಿಯಲ್ಲಿ ಮಾನಸಿ ಪಿಸುಮಾತಿನಲ್ಲೇ ಹೇಳಿದಳು. ನಿಜಕ್ಕೂ ಅವಳಿಗೆ ಮೀರಾಳ ಆಗಮನ ಹೆದರಿಕೆ ತಂದಿತ್ತು.

'ಆಗಲಿ ಬಿಡು. ಒಳ್ಳೆಯದೇ ಆಯ್ತು...'

ಪ್ರೊಫೆಸರ್ ಮುಂದುವರಿಸಿದ್ದರು.

'ಆತ ಪೂರ್ತಿಯಾಗಿ ಪೋಸ್ಟ್‌ಮಾರ್ಟಂ ಮಾಡಿಯೇ ಇಲ್ಲ. ಹೀಗಾಗಿ ಅವರಿಗಿದು ಕೊಲೆಯಿರಬಹುದೆಂಬ ಅನುಮಾನವೂ ಬಂದಿರಲಿಕ್ಕಿಲ್ಲ. ಈ ತಲೆಯ ಭಾಗ... ನೋಡಿ... ಹಿಂದಿನಿಂದ ಜೋರಾಗಿ ಭಾರಿ ವಸ್ತುವಿನಿಂದ ಹೊಡೆದಿದ್ದಾರೆ. ತಲೆ ಬುರುಡೆಯ ಹಿಂಭಾಗ ಸೀಳಿ ಚೂರಾಗಿದೆ. ಅನಾಮಧೇಯ ಕರೆ ನಿಜವಾಗಿದೆ. ಇದೊಂದು ಕೊಲೆಯೇ ಹೌದು...'

ವಿದ್ಯಾರ್ಥಿಗಳು ಅದನ್ನು ನೋಡಲು ಮುಂದೆ ಹೋದರು.

'ಮಾನ್ಸೀ...' ಮೀರಾ ಮತ್ತೆ ರಾಗ ತೆಗೆದಳು.

'ನಿನ್ನ ಕಾಲು ಹಿಡ್ಕೊತೀನಿ... ಪ್ಲೀಸ್ ಇಲ್ಲಿಂದ ಹೋಗು. ಸಂಜೆ ಹಾಸ್ಟೆಲ್‌ಗೆ ಬಂದಾಗ ಮಾತನಾಡಿದರಾಯ್ತು...' ಮಾನಸಿ ಗೋಗರೆದಳು.

'ನೀನು ಹಾಸ್ಟೆಲಿಗೆ ಬಂದ ಕೂಡಲೇ ಸ್ನಾನಕ್ಕೇಂತ ಮತ್ತೆ ಹೋಗಿ ಬಿಡ್ತೀಯಾ?'

'ನೀನು ಹೋಗ್ತೀಯೋ ಇಲ್ವೋ?' ಮಾನಸಿ ಕಣ್ಣರಳಿಸಿ ಹೇಳಿದಳು. ಮೀರಾ ಮರು ಮಾತನಾಡದೆ ಪೋಸ್ಟ್‌ಮಾರ್ಟಂ ಹಾಲಿನಿಂದ ಹೊರಗೆ ಬಂದಳು.

★★★

ಚಕ್ರವರ್ತಿ 'ಮೆಡಿಕಲ್ ಸೈನ್ಸ್ ಮತ್ತು ರಿಸರ್ಚ್ ಸೆಂಟರ್' ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿಗಾಗಿ ಬಂದಿದ್ದ ಸಾಕ್ಷಿ, ಮೀರಾ ಮತ್ತು ಮಾನಸಿ ಮೂರೂ ಹುಡುಗಿಯರು ಹಾಸ್ಟೆಲಿನಲ್ಲಿ ಒಂದೇ ರೂಮಿನಲ್ಲಿದ್ದರೂ, ಸ್ನಾತಕೋತ್ತರ ಪದವಿಯ ಆಯ್ಕೆ ಬೇರೆ ಬೇರೆಯಾಗಿತ್ತು. ಅವರ ಮೂರು ವರ್ಷಗಳ ಅವಧಿಯ ಪದವಿ ಮುಗಿಯುತ್ತಾ ಬಂದಿತ್ತು. ಆರು ತಿಂಗಳ ಬಳಿಕ ಅವರ ಅಂತಿಮ ಪರೀಕ್ಷೆ ಇದ್ದುದರಿಂದ ಗಂಭೀರವಾಗಿ ಓದುತ್ತಿದ್ದರು. ಪ್ರಬಂಧಗಳನ್ನು ಬರೆದು, ನಂತರ